67747

016

# ಆರನೆಯ ಚತುರ್ಮಾಸ ಬಿ.ಎ. ಪರೀಕ್ಷೆ – ಜುಲೈ/ಆಗಸ್ಟ್ 2023

## ಸ್ಕೀಮ್: ಸಿಬಿಸಿಎಸ್

## ಐಚ್ಛಿಕ ಕನ್ನಡ

## ಪ್ರಕಾರ ಕೇಂದ್ರಿತ ಅಧ್ಯಯನ : ಕನ್ನಡ ಸಾಹಿತ್ಯ ಪ್ರಕಾರ – ಸಣ್ಣಕಥೆ

**ಸಮಯ: 3 ಗಂಟೆ** **ಗರಿಷ್ಠ ಅಂಕ: 80**

1. ಐದು ಪ್ರಶ್ನೆಗಳಿಗೆ ಉತ್ತರಿಸಿ. **5x10=50**

೧. ಸಣ್ಣಕಥೆ ನಡೆದು ಬಂದ ದಾರಿಯನ್ನು ಸೋದಾಹರಣವಾಗಿ ವಿವರಿಸಿ.

೨. ಸಣ್ಣಕತೆಯ ಮೇಲೆ ಪಾಶ್ಚಾತ್ಯರ ಪ್ರಭಾವವನ್ನು ಗುರುತಿಸಿ.

೩. ಪಂಚತಂತ್ರ ಕೃತಿಯ ಆಶಯವನ್ನು ವಿವರಿಸಿ.

೪. ಆಧುನಿಕ ಕಥಾ ಪರಂಪರೆಯ ಬಗ್ಗೆ ವಿಶ್ಲೇಷಿಸಿ.

೫. ಸಣ್ಣಕಥೆಗಳ ಭಾಷಾ ವಿನ್ಯಾಸ ಹಾಗೂ ತಂತ್ರಗಳ ಬಗ್ಗೆ ವಿವರಿಸಿ.

೬. 'ನಾ ಕೊಂದ ಹುಡುಗಿ' ಕಥೆಯ ವೈಶಿಷ್ಟ್ಯತೆಯನ್ನು ಬರೆಯಿರಿ.

೭. ಬದುಕಿನಲ್ಲಿ ಆಯ್ಕೆಗಳು ಮುಖ್ಯ ಎಂಬುದನ್ನು 'ಆಯ್ಕೆ ನಮ್ಮ ಕೈಯಲ್ಲಿದೆ' ಕಥೆಯ ಹಿನ್ನೆಲೆಯಲ್ಲಿ ನಿರೂಪಿಸಿ.

೮. 'ಸವಾರಿ' ಕಥೆಯಲ್ಲಿ ವ್ಯಕ್ತವಾಗುವ ಶೋಷಣೆಯ ಪರಿಕಲ್ಪನೆಗಳನ್ನು ಗುರುತಿಸಿ.

MFGC LIBRARY

2. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ **4x5=20**

೧. ಜನಪದ ಪರಂಪರೆಯನ್ನು ಪರಿಚಯಿಸಿ.

೨. 'ವಡ್ಡಾರಾಧನೆ' ಕೃತಿಯ ಮಹತ್ವವನ್ನು ವಿವರಿಸಿ.

೩. ದೇವನೂರು ಮಹಾದೇವ ಅವರ ಕಥೆಗಳಲ್ಲಿ ದಲಿತ ಸಂವೇದನೆ ಹೇಗೆ ವ್ಯಕ್ತಗೊಂಡಿದೆ? ವಿಮರ್ಶಾತ್ಮಕವಾಗಿ ಬರೆಯಿರಿ.

೪. ಸಾರ್ಾ ಅಬೂಬಕ್ಕರ್ ಕಥೆಗಳಲ್ಲಿನ ಸ್ತ್ರೀಪರ ಕಾಳಜಿಯನ್ನು ವಿಶ್ಲೇಷಿಸಿ.

೫. 'ಕೊನೆಯ ಗಿರಾಕಿ' ಕಥೆಯ ವೈಶಿಷ್ಟ್ಯವನ್ನು ಬರೆಯಿರಿ.

೬. ಯು.ಆರ್. ಅನಂತಮೂರ್ತಿಯವರ ಕಥಾ ಸಾಹಿತ್ಯವನ್ನು ಪರಿಚಯಿಸಿ.

**PTO**

3. ಒಂದು ಭಾಗದ ವಿಶೇಷತೆಗಳನ್ನು ಗುರುತಿಸಿ 1x5=5

೧. ಸಿದ್ಧನ ತಲೆಗೆ ಸುತ್ತಿದ್ದ ಮುಂಡಾಸು ಕೆಳಗೆ ಉರುಳಿತ್ತು! ಕೊರಳಲ್ಲಿದ್ದ ಸಂಖ ನೆಲಕ್ಕೆ ಬಿದ್ದು ಸೀಳಿತ್ತು! ಸಣ್ಣಾಗಿ ಉರಿತಿದ್ದ ಚಿಮಣಿ ತಣ್ಣಗಾಯ್ತು! ಗವ್ವನೆ ಕತ್ತಲು ತುಂಬಿತ್ತು! ಸಿದ್ಧನ ಮೈಮಾಗಿದ್ ಆಭರಣಗಳು ಕಳಪಳಾಂತ ಮಾತ್ರ ಸದ್ದು ಮಾಡಿದವು. ಆಮೇಲೆ ಗವ್ವನೆ ಕತ್ತಲು ಸಣ್ಣಾಗಿ ಕರಗಿ ಕರಗಿ ಅದರಾಗೇ ಸಣ್ಣಾಗಿ ಮಾಯದ ತಿಳಿ ಬೆಳಕು ಮೂಡಿತು! ಮುಗಲಾಗ ಮೂರು ತಾಸಿನ ಚುಕ್ಕೆ ಕಣ್ಣಿಗೆ ಬಡಿವಂಗ ಬೆಳಗಿತ್ತು.

೨. ಇಂಡಿಯನ್ನರಲ್ಲಿ ಬಹಳ ಜನರಿಗೆ ಜೀವ ಉಪಭೋಗಿಸುವುದೇ ಗೊತ್ತಿಲ್ಲವೆಂದು ಕಾಣುತ್ತದೆ. ಸಂಕೋಚ, ನಾಚಿಕೆ, ಅಧೈರ್ಯ – ಮೈಚಳಿ ಬಿಟ್ಟು ಆಡುವುದು, ನಗುವುದು, ನಲಿಯುವುದು ಗೊತ್ತೇ ಎಲ್ಲವೇನೋ ಇವರಿಗೆ. ಉದಾಹರಣೆಗಾಗಿ ನಿಮ್ಮನ್ನೇ ತೆಗೆದುಕೊಳ್ಳಿ, ಎರಡು ದಿನಗಳಿಂದ ನಿಮ್ಮನ್ನು ನೋಡುತ್ತಿರುವೆ – ನಿಮ್ಮ ಗಾಂಭೀರ್ಯ, ಏಕಾಕಿತನ, ಮುದುಡಿಕೊಳ್ಳುವ ವೃತ್ತಿ ನೋಡಿ ನನಗಂತೂ ಹೇಗೆ ಹೇಗೋ ಅನಿಸುತ್ತದೆ.

4. ಒಂದು ವಿಷಯಕ್ಕೆ ಟಿಪ್ಪಣಿ ಬರೆಯಿರಿ 1x5=5

೧. ಧರ್ಮಾಮೃತ

೨. ನವೋದಯ ಕಥೆಗಳು

** *** **

MFGC LIBRARY